# ತಂತ್ರಜ್ಞಾನ ಅಭಿವೃದ್ಧಿ ಮಂಡಲಿ ಅಧಿನಿಯಮ, 1995

16.08.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 38ನೇ ಸಂಪುಟದ 1ನೇ ಸಂಚಿಕೆಯಲ್ಲಿ 204 ರಿಂದ 210ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ– I

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ– II

**ತಂತ್ರಜ್ಞಾನ ಅಭಿವೃದ್ಧಿ ಮಂಡಲಿ**

3. ಮಂಡಲಿಯ ರಚನೆ ಮತ್ತು ನಿಗಮನ
4. ಕಾರ್ಯದರ್ಶಿ ಮತ್ತು ಮಂಡಲಿಯ ಇತರ ಅಧಿಕಾರಿಗಳು ಹಾಗೂ ನೌಕರರು
5. ಮಂಡಲಿಯ ಸಮಿತಿಗಳು
6. ಮಂಡಲಿಯ ಪ್ರಕಾರ್ಯಗಳು

### ಅಧ್ಯಾಯ– III

**ಆರ್ಥಿಕ ಸಹಾಯದ ಮಂಜೂರಾತಿಗಾಗಿ ಅರ್ಜಿ**

7. ಆರ್ಥಿಕ ಸಹಾಯ, ಇತ್ಯಾದಿಗಳ ಮಂಜೂರಾತಿಗಾಗಿ ಅರ್ಜಿ

### ಅಧ್ಯಾಯ– IV

**ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ**

8. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು
9. ತಂತ್ರಜ್ಞಾನ ಅಭಿವೃದ್ಧಿ ಮತ್ತು ಉಪಯೋಗ ನಿಧಿ
10. ಹಣದ ಜಮೆಯ ಮತ್ತು ಹೊಣೆಗಾರಿಕೆಗಳ ವರ್ಗಾವಣೆ
11. ಆಯವ್ಯಯ
12. ವಾರ್ಷಿಕ ವರದಿ
13. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ
14. ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರ ವರದಿಗಳನ್ನು ಸಂಸತ್ತಿನ ಮುಂದೆ ಇಡುವುದು

## ಅಧ್ಯಾಯ- V

### ಸಂಕೀರ್ಣ

15. ಮಂಡಲಿಗೆ ವಿವರ ಪಟ್ಟಿಕೆಗಳನ್ನು ಸಲ್ಲಿಸುವುದು
16. ನಿರ್ದೇಶನವನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ
17. ಮಂಡಲಿಯನ್ನು ಅಧಿಕ್ರಮಿಸಲು ಕೇಂದ್ರ ಸರ್ಕಾರದ ಅಧಿಕಾರ
18. ಪ್ರತ್ಯಾಯೋಜನೆ
19. ಸದಸ್ಯರು, ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು
20. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
21. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ
22. ಮಂಡಲಿಯ ವಿನಿಯಮ ರಚನಾಧಿಕಾರ
23. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.

# ತಂತ್ರಜ್ಞಾನ ಅಭಿವೃದ್ಧಿ ಮಂಡಲಿ ಅಧಿನಿಯಮ, 1995

(1995ರ ಅಧಿನಿಯಮ ಸಂಖ್ಯೆ 44)

[16ನೇ ಡಿಸೆಂಬರ್, 1995]

ದೇಶೀಯ ತಂತ್ರಜ್ಞಾನದ ಅಭಿವೃದ್ಧಿಗೆ ಮತ್ತು ಅದರ ವಾಣಿಜ್ಯ ಉಪಯೋಗಕ್ಕೆ ಯತ್ನಿಸುತ್ತಿರುವ ಅಥವಾ ಆಮದು ಮಾಡಿಕೊಂಡ ತಂತ್ರಜ್ಞಾನವನ್ನು ವ್ಯಾಪಕ ಸ್ವದೇಶೀ ಉಪಯೋಗಗಳಿಗೆ ಅಳವಡಿಸಿಕೊಳ್ಳುತ್ತಿರುವ ಕೈಗಾರಿಕಾ ಸಂಸ್ಥೆಗಳಿಗೆ ಮತ್ತು ಇತರ ಏಜೆನ್ಸಿಗಳಿಗೆ ಈಕ್ವಿಟಿ ಬಂಡವಾಳವನ್ನು ಅಥವಾ ಯಾವುದೇ ಇತರ ಆರ್ಥಿಕ ಸಹಾಯವನ್ನು ಸಂದಾಯ ಮಾಡಲು ಒಂದು ಮಂಡಲಿಯನ್ನು ರಚಿಸುವುದಕ್ಕಾಗಿ ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಇದು, ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

## ಅಧ್ಯಾಯ- I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ತಂತ್ರಜ್ಞಾನ ಅಭಿವೃದ್ಧಿ ಮಂಡಲಿ ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ತಂತ್ರಜ್ಞಾನ ಅಭಿವೃದ್ಧಿ ಮಂಡಲಿ;

(ಬಿ) "ಅಧ್ಯಕ್ಷ" ಎಂದರೆ ಮಂಡಲಿಯ ಅಧ್ಯಕ್ಷ;

(ಸಿ) "ನಿಧಿ" ಎಂದರೆ 9ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ತಂತ್ರಜ್ಞಾನ ಅಭಿವೃದ್ಧಿ ಮತ್ತು ಅದರ ಉಪಯೋಗಕ್ಕಾಗಿ ಇರುವ ನಿಧಿ;

(ಡಿ) "ಸದಸ್ಯ" ಎಂದರೆ ಮಂಡಲಿಯ ಸದಸ್ಯ ಮತ್ತು ಅದರಲ್ಲಿ ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಇ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ಕಾರ್ಯದರ್ಶಿ" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಗೊಂಡ ಮಂಡಲಿಯ ಕಾರ್ಯದರ್ಶಿ;

(ಜಿ) ಇಲ್ಲಿ ಉಪಯೋಗಿಸಿರುವ ಮತ್ತು ಪರಿಭಾಷಿಸಿರದ ಆದರೆ, ಸಂಶೋಧನೆ ಮತ್ತು ಅಭಿವೃದ್ಧಿ ಉಪಕರ ಅಧಿನಿಯಮ, 1986 (1986ರ 32)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ- II

## ತಂತ್ರಜ್ಞಾನ ಅಭಿವೃದ್ಧಿ ಮಂಡಲಿ

**3. ಮಂಡಲಿಯ ರಚನೆ ಮತ್ತು ನಿಗಮನ.-** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ತಂತ್ರಜ್ಞಾನ ಅಭಿವೃದ್ಧಿ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಲಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಪೂರ್ವೋಕ್ತ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಮಂಡಲಿಯಲ್ಲಿ ಈ ಮುಂದಿನ ಸದಸ್ಯರು ಇರತಕ್ಕದ್ದು, ಎಂದರೆ:-

| | |
|---|---|
| (ಎ) ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ ಅಧ್ಯಕ್ಷ |
| (ಬಿ) ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆ ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ |
| (ಸಿ) ಹಣಕಾಸಿನ (ವೆಚ್ಚ) ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ |
| (ಡಿ) ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ |
| (ಇ) ಕೈಗಾರಿಕಾ ಅಭಿವೃದ್ಧಿ ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ |
| (ಎಫ್) ಗ್ರಾಮೀಣಾಭಿವೃದ್ಧಿ ಬಗ್ಗೆ ವ್ಯವಹರಿಸುತ್ತಿರುವ ಕೇಂದ್ರ ಸರ್ಕಾರದ ಮಂತ್ರಾಲಯ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ; | ಪದನಿಮಿತ್ತ |

(ಜಿ) ತಂತ್ರಜ್ಞಾನ ಅಭಿವೃದ್ಧಿ ಮತ್ತು ಉಪಯೋಗ, ಬ್ಯಾಂಕಿಂಗ್ ಮತ್ತು ಹಣಕಾಸು, ಕೈಗಾರಿಕೆ, ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿಯಲ್ಲಿ ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಿಸಬೇಕಾದ ನಾಲ್ವರಿಗಿಂತ ಹೆಚ್ಚಿಲ್ಲದಂತೆ ಗೊತ್ತುಪಡಿಸಬಹುದಾದಂಥ ಸಂಖ್ಯೆಯ ವ್ಯಕ್ತಿಗಳು; ಮತ್ತು — ಪದನಿಮಿತ್ತ

(ಹೆಚ್) ಮಂಡಲಿಯ ಕಾರ್ಯದರ್ಶಿ.

(4) (3)ನೆಯ ಉಪಪ್ರಕರಣದ (ಜಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಸದಸ್ಯರುಗಳ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕದ್ದು.

(5) ಅಧ್ಯಕ್ಷನು, ಮಂಡಲಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದರ ಜೊತೆಗೆ, ಮಂಡಲಿಯು ತನಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(6) ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು,-

(ಎ) ಮಂಡಲಿಯಲ್ಲಿ ಯಾವುದೇ ಖಾಲಿಸ್ಥಾನ ಇರುವ ಅಥವಾ ಮಂಡಲಿಯ ರಚನೆಯಲ್ಲಿ ಯಾವುದೇ ದೋಷ ಇರುವ;

(ಬಿ) ಮಂಡಲಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷವಿರುವ; ಅಥವಾ

(ಸಿ) ಪ್ರಕರಣದ ವಾಸ್ತವಿಕ ಗುಣದೋಷಗಳಿಗೆ ಬಾಧಕವಾಗದಂತೆ, ಮಂಡಲಿಯ ಕಾರ್ಯ ವಿಧಾನದಲ್ಲಿ ಯಾವುದೇ ದೋಷವಿರುವ

- ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**4. ಕಾರ್ಯದರ್ಶಿ ಮತ್ತು ಮಂಡಲಿಯ ಇತರ ಅಧಿಕಾರಿಗಳು ಹಾಗೂ ನೌಕರರು.-** (1) ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಕಾರ್ಯದರ್ಶಿಯನ್ನು ಹಾಗೂ ತಾನು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಇತರ ಅಧಿಕಾರಿಗಳು ಹಾಗೂ ನೌಕರರನ್ನು ನೇಮಕ ಮಾಡಿಕೊಳ್ಳಬಹುದು.

(2) ಕಾರ್ಯದರ್ಶಿಯ ಮತ್ತು ಮಂಡಲಿಯ ಇತರ ಅಧಿಕಾರಿಗಳ ಹಾಗೂ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

**5. ಮಂಡಲಿಯ ಸಮಿತಿಗಳು.–** (1) ಮಂಡಲಿಯು, ಈ ಅಧಿನಿಯಮದ ಅಡಿಯಲ್ಲಿ ಅದರ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಮತ್ತು ಅದರ ಪ್ರಕಾರ್ಯಗಳನ್ನು ನೆರವೇರಿಸಲು ಅವಶ್ಯವೆನಿಸಬಹುದಾದಂಥ ಸಮಿತಿಗಳನ್ನು ಈ ಬಗ್ಗೆ ರಚಿಸಲಾದ ನಿಯಮಗಳಿಗೊಳಪಟ್ಟು ನೇಮಕ ಮಾಡಬಹುದು.

(2) ಮಂಡಲಿಯು, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯಲ್ಲಿ ಮಂಡಲಿಯ ಸದಸ್ಯರಲ್ಲದ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಿಸಿದ ಯಾವುದೇ ಸಮಿತಿಯ ಸಹಸದಸ್ಯರನ್ನಾಗಿ ಆಯ್ಕೆ ಮಾಡಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಹಾಗೆ ಸಹಸದಸ್ಯನಾಗಿ ಆಯ್ಕೆಯಾದ ವ್ಯಕ್ತಿಯು ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಸಮಿತಿಯ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

**6. ಮಂಡಲಿಯ ಪ್ರಕಾರ್ಯಗಳು.–** ಮಂಡಲಿಯು,–

(ಎ) ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈಕ್ವಿಟಿ ಬಂಡವಾಳವನ್ನು ಅಥವಾ ಯಾವುದೇ ಇತರ ಆರ್ಥಿಕ ಸಹಾಯವನ್ನು ದೇಶೀಯ ತಂತ್ರಜ್ಞಾನವನ್ನು ವ್ಯಾಪಕ ಸ್ವದೇಶೀ ಉಪಯೋಗಗಳಿಗೆ ಅಳವಡಿಸಿಕೊಳ್ಳುತ್ತಿರುವ ಯಾವುದೇ ಕೈಗಾರಿಕಾ ಸಂಸ್ಥೆಗಳಿಗೆ ಮತ್ತು ಇತರ ಏಜೆನ್ಸಿಗಳಿಗೆ ಒದಗಿಸಬಹುದು;

(ಬಿ) ಸ್ವದೇಶೀ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಅಥವಾ ಆಮದು ಮಾಡಿಕೊಂಡ ತಂತ್ರಜ್ಞಾನವನ್ನು ವಾಣಿಜ್ಯ ಉಪಯೋಗಕ್ಕಾಗಿ ಅಳವಡಿಸುವ ಕಾರ್ಯದಲ್ಲಿ ತೊಡಗಿರುವಂಥ ಹಾಗೂ ಕೇಂದ್ರ ಸರ್ಕಾರವು ಮಾನ್ಯತೆ ನೀಡಬಹುದಾದಂಥ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಬಹುದು;

(ಸಿ) ಕೇಂದ್ರ ಸರ್ಕಾರವು ಅದಕ್ಕೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸಬಹುದು.

## ಅಧ್ಯಾಯ– III

### ಆರ್ಥಿಕ ಸಹಾಯದ ಮಂಜೂರಾತಿಗಾಗಿ ಅರ್ಜಿ

**7. ಆರ್ಥಿಕ ಸಹಾಯ, ಇತ್ಯಾದಿಗಳ ಮಂಜೂರಾತಿಗಾಗಿ ಅರ್ಜಿ.–** (1) 6ನೇ ಪ್ರಕರಣದ ಅಡಿಯಲ್ಲಿ ನಮೂದಿಸಲಾದ ಉದ್ದೇಶಗಳಿಗಾಗಿ, ಆರ್ಥಿಕ ಸಹಾಯದ ಮಂಜೂರಾತಿಗಾಗಿ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮಂಡಲಿಗೆ ಸಲ್ಲಿಸತಕ್ಕದ್ದು.

(2) ಮಂಡಲಿಯು, ಅರ್ಜಿಯನ್ನು ಪರಿಶೀಲಿಸಿದ ನಂತರ ಮತ್ತು ಅದು ಅವಶ್ಯವೆಂದು ಭಾವಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ, ಲಿಖಿತ ಆದೇಶದ ಮೂಲಕ ಆರ್ಥಿಕ ಸಹಾಯಕ್ಕೆ ಮಂಜೂರಾತಿ ನೀಡಬಹುದು ಅಥವಾ ಅದರ ಮಂಜೂರಾತಿಯನ್ನು ನಿರಾಕರಿಸಬಹುದು:

ಪರಂತು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ಹೊರತು ಯಾವುದೇ ಮಂಜೂರಾತಿಯನ್ನು ನಿರಾಕರಿಸತಕ್ಕದ್ದಲ್ಲ.

## ಅಧ್ಯಾಯ- IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**8. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**- ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಯುಕ್ತ ವಿನಿಯೋಜನೆಯನ್ನು ಮಾಡಿದ ನಂತರ, ಆ ಸರ್ಕಾರವು ಅವಶ್ಯಕವೆಂದು ಪರಿಗಣಿಸುವಷ್ಟು ಹಣದ ಮೊತ್ತಗಳ ಅನುದಾನಗಳನ್ನು ಮತ್ತು ಸಾಲಗಳನ್ನು ಮಂಡಲಿಗೆ ನೀಡಬಹುದು.

**9. ತಂತ್ರಜ್ಞಾನ ಅಭಿವೃದ್ಧಿ ಮತ್ತು ಉಪಯೋಗ ನಿಧಿ.**- (1) ತಂತ್ರಜ್ಞಾನ ಅಭಿವೃದ್ಧಿ ಮತ್ತು ಉಪಯೋಗ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಆ ನಿಧಿಗೆ, ಈ ಕೆಳಕಂಡವುಗಳನ್ನು ಜಮೆ ಮಾಡತಕ್ಕದ್ದು,-

(ಎ) 8ನೇ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ಮಂಡಲಿಗೆ ನೀಡುವ ಯಾವುವೇ ಅನುದಾನಗಳು ಮತ್ತು ಸಾಲಗಳು;

(ಬಿ) ಯಾವುದೇ ಇತರ ಮೂಲದಿಂದ ಮಂಡಲಿಯು ಸ್ವೀಕರಿಸುವ ಎಲ್ಲಾ ಮೊತ್ತಗಳು;

(ಸಿ) ನಿಧಿಯಿಂದ ನೀಡಲಾದ ಮೊತ್ತಗಳ ವಸೂಲಾತಿ; ಮತ್ತು

(ಡಿ) ನಿಧಿಯ ಮೊಬಲಗಿನ ಹೂಡಿಕೆಯಿಂದ ಬರುವ ಯಾವುದೇ ಆದಾಯ.

(2) ನಿಧಿಯನ್ನು ಈ ಮುಂದಿನ ವೆಚ್ಚಗಳನ್ನು ಭರಿಸುವುದಕ್ಕಾಗಿ ವಿನಿಯೋಗಿಸತಕ್ಕದ್ದು,-

(ಎ) ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಲಾದ ಧ್ಯೇಯಗಳಿಗಾಗಿ ಮತ್ತು ಉದ್ದೇಶಗಳಿಗಾಗಿ ಮಾಡಿದ ವೆಚ್ಚಗಳು;

(ಬಿ) ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ವೇತನಗಳು, ಭತ್ಯೆಗಳು ಮತ್ತು ಇತರ ವೆಚ್ಚಗಳು; ಮತ್ತು

(ಸಿ) ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮಾಡುವ ವೆಚ್ಚಗಳು.

**10. ಹಣದ ಜಮೆಯ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.-** ಈ ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ,-

(ಎ) ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964 (1964ರ 18)ರ 14ನೇ ಪ್ರಕರಣದ ಅಡಿಯಲ್ಲಿ ಅಭಿವೃದ್ಧಿ ಬ್ಯಾಂಕ್‌ನಿಂದ ಸ್ಥಾಪಿತವಾದ ಅಭಿವೃದ್ಧಿ ಸಹಾಯ ನಿಧಿಯ ಭಾಗವಾಗಿರುವ ಸಂಶೋಧನೆ ಮತ್ತು ಅಭಿವೃದ್ಧಿ ಉಪಕರ ಅಧಿನಿಯಮ, 1986 (1986ರ 32)ರ 5ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಉದ್ಯಮ ಬಂಡವಾಳ ನಿಧಿಯಲ್ಲಿ ಜಮೆಯಾಗಿರುವ ಹಣದ ಮೊತ್ತಗಳು ಮಂಡಲಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕದ್ದು;

(ಬಿ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಅಭಿವೃದ್ಧಿ ಬ್ಯಾಂಕ್‌ಗೆ ಬರಬೇಕಾಗಿದ್ದ ಹಣದ ಎಲ್ಲಾ ಮೊತ್ತಗಳನ್ನು ಮಂಡಲಿಗೆ ಬರಬೇಕಾದ ಬಾಕಿಗಳೆಂದು ಭಾವಿಸತಕ್ಕದ್ದು;

(ಸಿ) ಉದ್ಯಮ ಬಂಡವಾಳ ನಿಧಿಯ ಉದ್ದೇಶಕ್ಕಾಗಿ ಅಥವಾ ಅದರ ಸಂಬಂಧದಲ್ಲಿ, ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಅಭಿವೃದ್ಧಿ ಬ್ಯಾಂಕ್‌ನಿಂದ, ಬ್ಯಾಂಕ್‌ನೊಂದಿಗೆ ಅಥವಾ ಬ್ಯಾಂಕ್‌ನ ಪರವಾಗಿ ವಹಿಸಲಾದ ಎಲ್ಲಾ ಋಣಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳನ್ನು, ಮಾಡಿಕೊಳ್ಳಲಾದ ಎಲ್ಲಾ ಕರಾರುಗಳು ಮತ್ತು ಒಪ್ಪಂದಗಳನ್ನು ಮತ್ತು ಮಾಡಲು ತೊಡಗಿರುವ ಎಲ್ಲಾ ವಿಷಯಗಳು ಮತ್ತು ಕಾರ್ಯಗಳನ್ನು, ಮಂಡಲಿಯಿಂದ, ಮಂಡಲಿಯೊಂದಿಗೆ ಅಥವಾ ಮಂಡಲಿಯ ಪರವಾಗಿ ಮಾಡಲು ತೊಡಗಲಾಗಿದೆಯೆಂದು ಭಾವಿಸತಕ್ಕದ್ದು;

(ಡಿ) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ, ಅಭಿವೃದ್ಧಿ ಬ್ಯಾಂಕು ಹೂಡಿದ್ದ ಅಥವಾ ಅದರ ವಿರುದ್ಧ ಹೂಡಬಹುದಾಗಿದ್ದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಮಂಡಲಿಯು ಮುಂದುವರಿಸಬಹುದು ಅಥವಾ ಹೂಡಬಹುದು ಅಥವಾ ಮಂಡಲಿಯ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು.

**11. ಆಯವ್ಯಯ.-** ಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದಲ್ಲಿ ಮಂಡಲಿಯ ಅಂದಾಜು ಜಮೆಗಳು ಮತ್ತು ವೆಚ್ಚಗಳನ್ನು ತೋರಿಸುವ ಮುಂದಿನ ಹಣಕಾಸು ವರ್ಷದ ಬಜೆಟನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**12. ವಾರ್ಷಿಕ ವರದಿ.-** ಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಕಾಲದಲ್ಲಿ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಚಟುವಟಿಕೆಗಳ ಪೂರ್ಣ ವಿವರವನ್ನು ನೀಡುವ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳನ್ನು

ಮತ್ತು ಇತರ ಸುಸಂಬದ್ಧ ದಸ್ತಾವೇಜುಗಳನ್ನು ಮಂಡಲಿಯು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವನ್ನು ತಯಾರಿಸತಕ್ಕದ್ದು.

(2) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವ ಅವೇ ಹಕ್ಕುಗಳು, ವಿಶೇಷಾಧಿಕಾರಗಳು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಈ ಅಧಿನಿಯಮದ ಮೇರೆಗೆ ಮಂಡಲಿಯ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ಓಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಮಂಡಲಿಯ ಯಾವುದೇ ಕಛೇರಿಗಳನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(3) ಮಂಡಲಿಯ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾ ಲೆಕ್ಕಪರಿಶೋಧಕನು ಪ್ರತಿವರ್ಷ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ಮಂಡಲಿಯು ಸಂದಾಯ ಮಾಡತಕ್ಕದ್ದು.

(4) ಮಂಡಲಿಯು, ನಿಯಮಿಸಬಹುದಾದಂಥ ದಿನಾಂಕಕ್ಕಿಂತ ಮುಂಚೆ ಅದರ ಲೆಕ್ಕಪತ್ರಗಳ ಲೆಕ್ಕಪರಿಶೋಧನಾ ಪ್ರತಿಯನ್ನು, ಲೆಕ್ಕಪರಿಶೋಧಕರ ವರದಿಯ ಜೊತೆಗೆ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

**14. ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಕರ ವರದಿಗಳನ್ನು ಸಂಸತ್ತಿನ ಮುಂದೆ ಇಡುವುದು.**- ಕೇಂದ್ರ ಸರ್ಕಾರವು ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಅವುಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ- V
## ಸಂಕೀರ್ಣ

**15. ಮಂಡಲಿಗೆ ವಿವರಪಟ್ಟಿಕೆಗಳನ್ನು ಸಲ್ಲಿಸುವುದು.**- (1) ಮಂಡಲಿಯಿಂದ ಆರ್ಥಿಕ ಸಹಾಯವನ್ನು ಪಡೆಯುತ್ತಿರುವ ಒಂದು ಕೈಗಾರಿಕಾ ಸಂಬಂಧಿ ಸಂಸ್ಥೆಯು ಅಥವಾ ಒಂದು ಸಂಸ್ಥೆಯು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಮಂಡಲಿಗೆ ವಿವರಪಟ್ಟಿಕೆಗಳನ್ನು ಸಲ್ಲಿಸತಕ್ಕದ್ದು.

(2) ಮಂಡಲಿಯು, ಯಾವುದೇ ಕಾಲದಲ್ಲಿ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕೈಗಾರಿಕಾ ಸಂಬಂಧಿ ಸಂಸ್ಥೆ ಅಥವಾ ಸಂಸ್ಥೆಗೆ ಭೇಟಿ ನೀಡಿ ಈ ಪ್ರಕರಣದ ಅಡಿಯಲ್ಲಿ ಕಳುಹಿಸಿರುವ ಯಾವುದೇ ವಿವರಪಟ್ಟಿಕೆಯ ನಿಖರತೆಯನ್ನು ಪರಿಶೀಲಿಸಲು ಒಬ್ಬ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

**16. ನಿರ್ದೇಶನವನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಮಂಡಲಿಯು ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳ ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ, ಕಾರ್ಯನೀತಿಯ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ನೀಡಬಹುದಾದಂಥ ಲಿಖಿತ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ, ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮಂಡಲಿಗೆ ಸಾಧ್ಯವಾದಷ್ಟು ಮಟ್ಟಿಗೆ ಅವಕಾಶವನ್ನು ಕೊಡತಕ್ಕದ್ದು.

(2) ಒಂದು ಪ್ರಶ್ನೆಯು ಕಾರ್ಯನೀತಿಗೆ ಸಂಬಂಧಿಸಿದ್ದೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**17. ಮಂಡಲಿಯನ್ನು ಅಧಿಕ್ರಮಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು ಯಾವುದೇ ಕಾಲದಲ್ಲಿ,–

(ಎ) ಗಂಭೀರ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಅಡಿಯಲ್ಲಿ ಮಂಡಲಿಗೆ ವಿಧಿಸಿದ್ಧ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅದು ಅಸಮರ್ಥವಾಗಿದೆಯೆಂದು; ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ್ದ ಯಾವುದೇ ನಿರ್ದೇಶನವನ್ನು ಪಾಲಿಸಲು ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಅಡಿಯಲ್ಲಿ ಮಂಡಲಿಗೆ ವಿಧಿಸಿದ್ದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಮಂಡಲಿಯು ಸತತವಾಗಿ ತಪ್ಪಿದೆಯೆಂದು ಮತ್ತು ಹಾಗೆ ತಪ್ಪಿದ್ದರ ಪರಿಣಾಮವಾಗಿ ಮಂಡಲಿಯ ಹಣಕಾಸಿನ ಪರಿಸ್ಥಿತಿಯು ಅಥವಾ ಮಂಡಲಿಯ ಆಡಳಿತವು ಅವನತಿಗೆ ಇಳಿದಿದೆಯೆಂದು; ಅಥವಾ

(ಸಿ) ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಅಧಿಕ್ರಮಿಸುವುದು ಅವಶ್ಯವೆನ್ನಿಸುವಂಥ ಸನ್ನಿವೇಶಗಳು ಉಂಟಾಗಿವೆಯೆಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆರು ತಿಂಗಳುಗಳಿಗೆ ಮೀರದಷ್ಟು ಅವಧಿಯವರೆಗೆ ಮಂಡಲಿಯನ್ನು ಅಧಿಕ್ರಮಣಗೊಳಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಂಡಲಿಯ ಅಧಿಕ್ರಮಣದ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,–

(ಎ) ಅಧಿಕ್ರಮಣದ ದಿನಾಂಕದಿಂದ, ಎಲ್ಲ ಸದಸ್ಯರು ತಮ್ಮ ಅಂಥ ಪದಗಳನ್ನು ಖಾಲಿ ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಅಡಿಯಲ್ಲಿ, ಮಂಡಲಿಯು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಅಡಿಯಲ್ಲಿ ಮಂಡಲಿಯು ಪುನರ್‌ರಚಿತವಾಗುವವರೆಗೆ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) ಮಂಡಲಿಯ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಎಲ್ಲಾ ಸ್ವತ್ತು, (3)ನೇ ಉಪಪ್ರಕರಣದ ಅಡಿಯಲ್ಲಿ ಮಂಡಲಿಯು ಪುನರ್‌ರಚಿತವಾಗುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ್ರಮಣದ ಅವಧಿಯು ಮುಕ್ತಾಯವಾದ ಮೇಲೆ, ಕೇಂದ್ರ ಸರ್ಕಾರವು ಹೊಸ ನೇಮಕಾತಿಯ ಮೂಲಕ ಮಂಡಲಿಯನ್ನು ಪುನರ್‌ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ, (2)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ತಮ್ಮ ಪದಗಳನ್ನು ಖಾಲಿ ಮಾಡಿರುವಂಥ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ನೇಮಕಾತಿಗೆ ಅನರ್ಹರೆಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, ಅಧಿಕ್ರಮಣದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಯಾವುದೇ ಕಾಲದಲ್ಲಿ ಈ ಉಪಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವಂತೆ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಮತ್ತು ಅಂಥ ಕ್ರಮವನ್ನು ಕೈಗೊಳ್ಳಲು ಕಾರಣವಾಗುವ ಸನ್ನಿವೇಶಗಳ ಬಗ್ಗೆ ಒಂದು ಪೂರ್ಣ ವರದಿಯನ್ನು ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**18. ಪ್ರತ್ಯಾಯೋಜನೆ.**– ಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು, ಮಂಡಲಿಯ ಅಧ್ಯಕ್ಷನಿಗೆ ಅಥವಾ ಇತರ ಯಾರೇ ಸದಸ್ಯನಿಗೆ ಅಥವಾ ಮಂಡಲಿಯ ಯಾರೇ ಅಧಿಕಾರಿಗೆ ತಾನು ಅವಶ್ಯವೆಂದು ಭಾವಿಸಬಹುದಾದಂತೆ (22ನೇ ಪ್ರಕರಣದ ಅಡಿಯಲ್ಲಿನ

ಅಧಿಕಾರಗಳನ್ನು ಹೊರತುಪಡಿಸಿ) ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**19. ಸದಸ್ಯರು, ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು.**- ಎಲ್ಲಾ ಸದಸ್ಯರು, ಮಂಡಲಿಯ ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಸಾರ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**20. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.**- ಸರ್ಕಾರದ ಅಥವಾ ಮಂಡಲಿಯ ಅಥವಾ ಅದರಿಂದ ನೇಮಕಗೊಂಡ ಯಾವುದೇ ಸಮಿತಿಯ ಅಥವಾ ಮಂಡಲಿಯ ಅಥವಾ ಅಂಥ ಸಮಿತಿಯ ಯಾರೇ ಸದಸ್ಯನ ಅಥವಾ ಸರ್ಕಾರದ ಅಥವಾ ಮಂಡಲಿಯ ಯಾರೇ ಅಧಿಕಾರಿಯ ಅಥವಾ ನೌಕರನ ಅಥವಾ ಸರ್ಕಾರದಿಂದ ಅಥವಾ ಮಂಡಲಿಯಿಂದ ಅಧಿಕೃತನಾದ ಯಾರೇ ಇತರ ವ್ಯಕ್ತಿಯ ವಿರುದ್ಧ ಅವನು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

**21. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ವಿಷಯಗಳಿಗಾಗಿ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (3)ನೇ ಉಪಪ್ರಕರಣದ (ಜಿ) ಖಂಡದ ಅಡಿಯಲ್ಲಿ ಮಂಡಲಿಯ ಸದಸ್ಯರ ಸಂಖ್ಯೆ;

(ಬಿ) 3ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಮಂಡಲಿಯ ಸದಸ್ಯರ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು;

(ಸಿ) 3ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು;

(ಡಿ) 5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸಮಿತಿಗಳ ರಚನೆ;

(ಇ) 7ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯ ನಮೂನೆ;

(ಎಫ್) ಮಂಡಲಿಯು, 11ನೇ ಪ್ರಕರಣದ ಅಡಿಯಲ್ಲಿ ತನ್ನ ಆಯವ್ಯಯವನ್ನು ಮತ್ತು 12ನೇ ಪ್ರಕರಣದ ಅಡಿಯಲ್ಲಿ ತನ್ನ ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬೇಕೋ, ಆ ನಮೂನೆ ಮತ್ತು ಆ ಕಾಲ;

(ಜಿ) 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಣ ಪತ್ರಗಳ ನಮೂನೆ ಮತ್ತು ಅದೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಪರಿಶೋಧಿಸಿದ ಲೆಕ್ಕಪತ್ರಗಳ ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಯಾವ ದಿನಾಂಕಕ್ಕೆ ಮೊದಲು ಕಳುಹಿಸಿಕೊಡಬಹುದೋ ಆ ದಿನಾಂಕ;

(ಹೆಚ್) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಯಾವ ವಿಷಯದ ಸಂಬಂಧದಲ್ಲಿ ಉಪಬಂಧವನ್ನು ರಚಿಸಬೇಕಾಗಿದೆಯೋ ಅಥವಾ ರಚಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ.

**22. ಮಂಡಲಿಯ ವಿನಿಯಮ ರಚನಾಧಿಕಾರ.–** (1) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಾಮಾನ್ಯವಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಕಾರ್ಯದರ್ಶಿಯ ಮತ್ತು ಮಂಡಲಿಯ ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 6ನೇ ಪ್ರಕರಣದ (ಎ) ಖಂಡದ ಮೇರೆಗೆ ಯಾವ ಷರತ್ತುಗಳಿಗೊಳಪಟ್ಟು ಮಂಡಲಿಯು ಈಕ್ವಿಟಿ ಬಂಡವಾಳ ಒದಗಿಸಬಹುದೋ ಆ ಷರತ್ತುಗಳು;

(ಸಿ) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಗೆ ಸಲ್ಲಿಸಬಹುದಾದ ವಿವರಪಟ್ಟಿಕೆಗಳ ನಮೂನೆ ಮತ್ತು ಅವುಗಳನ್ನು ಸಲ್ಲಿಸಬಹುದಾದ ಕಾಲ.

**23. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.**- ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅವನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಎರಡೂ ಸದನಗಳು ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮ ಅಥವಾ ವಿನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.